## 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

**ಸಿ ಸಿ ನಂ. 1580/2020**

| | | |
|---|---|---|
| ಹೆಸರು | ಬಸವರಾಜಪ್ಪ | PW 1 |
| ತಂದೆಯ ಹೆಸರು | ಮಹಾದೇವಪ್ಪ | CW 1 |
| ವಯಸ್ಸು | 72 ವರ್ಷ | |
| ಉದ್ಯೋಗ | ವ್ಯವಸಾಯ | ದಿನಾಂಕ 21.07.2023 |
| ವಾಸ | ಬೂದಿಹಾಳ್ ಗ್ರಾಮ | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಸುಮಾರು 3 ವರ್ಷಗಳ ಹಿಂದೆ ಹರಿಹರ ತಾಲೂಕಿನ ಬೂದಿಹಾಳ್ ಗ್ರಾಮದ ಮಾರಿಕಾಂಬ ದೇವಸ್ಥಾನದಲ್ಲಿ ರಾತ್ರಿ ಕಳ್ಳತನವಾಗಿದ್ದು ಬೆಳಗ್ಗೆ ಗೊತ್ತಾಯಿತು. ಒಂದು ಮೂಗುತಿ, 2 ಬೆಳ್ಳಿ ಚೈನುಗಳು, 2 ಬೆಳ್ಳಿ ದೀಪಗಳು, ಕೊರಳಲ್ಲಿ ಹಾಕುವ ಒಂದು ಬೆಳ್ಳಿಯ ಲಿಂಗದ ಚೌಕ, ಬಂಗಾರದ ಗುಂಡಿನ ಸರ -ಗಳು ಕಳ್ಳತನವಾಗಿತ್ತು. ನಂತರ ಗ್ರಾಮಸ್ಥರೆಲ್ಲರೂ ಸೇರಿ ಮಲೆಬೆನೂರು ಪೋಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದೂರು ಆಗಿದ್ದು, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-1 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಕೆಲವು ನಂತರ ಪೋಲೀಸರು ದೇವಸ್ಥಾನಕ್ಕೆ ಬಂದು ಚಾಸಾ.2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನಂತರ ಪೋಲೀಸರು ಕಚ್ಚಾನಕಾಶೆಯನ್ನು ತಯಾರಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ಒಂದು ಸ್ಥಳ ಪಂಚನಾಮೆ ಆಗಿದ್ದು, ಮತ್ತೊಂದು ಕಚ್ಚಾನಕಾಶೆಯಾಗಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಪೋಟೋಗಳನ್ನು ತೆಗೆದಿದ್ದು ಸಾಕ್ಷಿಯು ಅದರಲ್ಲಿ ತಾನು ಇರುವುದನ್ನು ಗುರುತಿಸಿದ್ದರಿಂದ ಸದರಿ ಪೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**ಪಾಟಿಸವಾಲು ಆರೋಪಿ ಪರ ವಕೀಲರಿಂದ ಃ**

ಕಳ್ಳತನವಾದ ಜಾಗ ನಮ್ಮೂರಿನ ಗ್ರಾಮ ದೇವತೆಯ ದೇವಸ್ಥಾನ ಎಂದರೆ ಸರಿ. ಊರಿನ ಜನರೆಲ್ಲರೂ ಸೇರಿ ಸದರಿ ದೇವಸ್ಥಾನಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆ ಎಂದರೆ ಸರಿ. ಸದರಿ ಕಮಿಟಿಯನ್ನು ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿ ಮಾಡಿದ್ದೇವೆ. ನಂತರ ವರ್ಷಕ್ಕೊಮ್ಮೆ

ದೇವಸ್ಥಾನಕ್ಕೆ ಭಕ್ತಾಧಿಗಳು ಕಾಣಿಕೆ ರೂಪದಲ್ಲಿ ನೀಡಿದಂತಹ ಹಣ ಮತ್ತು ಒಡವೆಗಳನ್ನು ಪರಿಶೀಲಿಸಿ ಲೆಕ್ಕ ಪತ್ರಗಳನ್ನು ತಯಾರಿಸಿ ಲೆಕ್ಕ ಪರಿಶೋಧಕರ ಮುಂದೆ ಹಾಜರು ಪಡಿಸಿ ಲೆಕ್ಕ ಪರಿಶೋಧನೆ ಮಾಡಿಸುತ್ತೇವೆ ಎಂದರೆ ಸರಿ. ನನ್ನ ದೇವಸ್ಥಾನಕ್ಕೆ ಸಿಸಿ ಟಿವಿ ಕ್ಯಾಮೆರಾಗಳು ಇಲ್ಲ. ಸದರಿ ಕಳ್ಳತನವನ್ನು ಯಾರು ಮಾಡಿದರು ಎಂಬುದು ನನಗೆ ಗೊತ್ತಾಗಿಲ್ಲ. ದೂರನ್ನು ಪೋಲೀಸರೇ ಬರೆದುಕೊಂಡಿರುತ್ತಾರೆ. ಪೋಲೀಸರು ದೂರನ್ನು ತಯಾರಿಸಿ ಸಹಿ ಮಾಡಿ ಎಂದು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಆ ಸಮಯಕ್ಕೆ ಕರೋನ ಇದ್ದುದರಿಂದ ಸಾಮಾಜಿಕ ಅಂತರವಿತ್ತು ಎಂದು ನುಡಿಯುತ್ತಾರೆ. ನಾನು ಸದರಿ ಕಮಿಟಿಗೆ ಅಧ್ಯಕ್ಷನಾಗಿರುತ್ತೇನೆ. ದೂರನ್ನು ಸಲ್ಲಿಸುವ ಕಾಲಕ್ಕೆ ಪೋಲೀಸರ ಮುಂದೆ ನಾನು ಕಮಿಟಿಯ ಅಧ್ಯಕ್ಷ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸ್ಥಳ ಪಂಚನಾಮೆ ಕಾಲಕ್ಕೆ ಬಂದ ಪೋಲೀಸರ ಹೆಸರು ಮತ್ತು ಪದನಾಮ ನನಗೆ ಗೊತ್ತಿಲ್ಲ. ಪಂಚನಾಮೆ ಮತ್ತು ಕಚ್ಚಾನಕಾಶೆಯನ್ನು ಪೋಲೀಸರು ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಪಿರ್ಯಾದಿಯಲ್ಲಿ ನಮೂದಿಸಿರುವ ಆಭರಣಗಳನ್ನು ಅವುಗಳ ಮೌಲ್ಯವನ್ನು ತಜ್ಞರ ಅಭಿಪ್ರಾಯ ಪಡೆದು ಉಲ್ಲೇಖಿಸಿಲ್ಲ ಎಂದರೆ ಸರಿ. ಮಾಲನ್ನು ದಸ್ತಗಿರಿ ಮಾಡಿದ ನಂತರ ಪೋಲೀಸರು ಆರೋಪಿಯನ್ನು ಕರೆದುಕೊಂಡು ಬಂದು ಇವನೇ ಆರೋಪಿ ಎಂದು ತೋರಿಸಿದಾಗಲೇ ನಮಗೆ ತಿಳಿದು ಬಂದಿದ್ದು, ಅದಕ್ಕಿಂತ ಪೂರ್ವದಲ್ಲಿ ನಾವು ಆರೋಪಿಯನ್ನು ನೋಡಿಲ್ಲ. ಪಂಚನಾಮೆ ಜರುಗಿಸಲು ಪೋಲೀಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಮಾಲನ್ನು ದಸ್ತಗಿರಿ ಮಾಡುವ ಕಾಲಕ್ಕೆ ಪೋಲೀಸರು ನಮಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಫೋನಿನ ಮೂಲಕ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತನಿಗೂ ಮತ್ತು ಸದರಿ ಕಳ್ಳತನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,

ಹರಿಹರ.